**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ. 1189/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರುತಿ |
| ಗಂಡನ ಹೆಸರು | : | ಶ್ರೀನಿವಾಸ್ |
| ವಯಸ್ಸು | : | 33 |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಶ್ರೀರಾಂಪುರ, ಮೈಸೂರು |

**ಸಾಕ್ಷಿಯನ್ನು ದಿನಾಂಕಃ 29.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಜಿ ಪಿ ಆರ್ ವಕೀಲರಿಂದಃ**

ನನಗೆ ಪಿರ್ಯಾದಿಯ ಪರಿಚಯವಿರುವುದಿಲ್ಲ. ನನ್ನ ಹಾಗೂ ಪಿರ್ಯಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ನಾನು ಪಿರ್ಯಾದಿಯಿಂದ ಯಾವುದೇ ಸಾಲ ಪಡೆದಿರುವುದಿಲ್ಲ ಹಾಗೂ ಅವರಿಗೆ ಯಾವುದೇ ಚೆಕ್ ಅನ್ನು ನೀಡಿರುವುದಿಲ್ಲ. ನಾನು ಪಿರ್ಯಾದಿಯನ್ನು ಹಿಂದೆ ಎಂದೂ ನೋಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾದ ನಂತರ ನ್ಯಾಯಾಲಯದಲ್ಲಿಯೇ ಪಿರ್ಯಾದಿಯನ್ನು ಮೊದಲು ನೋಡಿರುತ್ತೇನೆ. ನನಗೆ ಪಿರ್ಯಾದಿಯ ವಕೀಲರ ಮೂಲಕ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸು ಬಂದಾಗ ಈ ಬಗ್ಗೆ ನನ್ನ ಗಂಡನಲ್ಲಿ ವಿಚಾರಿಸಿದಾಗ ಅವರು ನನಗೆ ಗೊತ್ತಿಲ್ಲದ ಹಾಗೇ 7 ಲಕ್ಷಕ್ಕೆ ನನಗೆ ಸೇರಿದ ಎರಡು ಚೆಕ್ ಗಳನ್ನು ಪಿರ್ಯಾದಿಗೆ ನೀಡಿರುವುದಾಗಿ ಹಾಗೂ ಇನ್ನೂ 3 ಲಕ್ಷ ನಗದು ಹಣವನ್ನು ಸೋಮೇಶ್ ಎನ್ನುವ ವ್ಯಕ್ತಿಯ

ಸಮಕ್ಷಮದಲ್ಲಿ ಪಿರ್ಯಾದಿಗೆ ನೀಡಿರುವುದಾಗಿ ತಿಳಿಸಿರುತ್ತಾರೆ. ಆ ನಂತರವೇ ನನಗೆ ನನ್ನ ಚೆಕ್ಕು ಪಿರ್ಯಾದಿಯ ಕೈಗೆ ಹೋಗಿರುವ ಬಗ್ಗೆ ಗೊತ್ತಾಗಿರುತ್ತದೆ. ಆದರೆ ಪಿರ್ಯಾದಿಯು 10 ಲಕ್ಷ ಹಣದ ವಸೂಲಿಗೆ ನನ್ನ ವಿರುದ್ಧ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತಾರೆ. ನಾನು ನಿಪಿ-1 ಹಾಗೂ 2 ರಲ್ಲಿ ತಿಳಿಸಿರುವ ಯಾವುದೇ ಹಣವನ್ನು ಪಿರ್ಯಾದಿಗೆ ನೀಡಲು ಬಾಧ್ಯಸ್ಥಳಲ್ಲ. ಆದ್ದರಿಂದ ಪಿರ್ಯಾದಿ ಸಲ್ಲಿಸಿದ ಪಿರ್ಯಾದನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿರುತ್ತಾರೆ, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**